International Journal of Kannada Research 2018; 4(3): 207-211




International Journal of Kannada Research
www.kannadajournal.com

**ISSN: 2454–5813**
IJKR 2018; 4(3): 207-211
© 2018 IJKR
www.kannadajournal.com
Received: 05-05-2018
Accepted: 06-06-2018

**Chethana Achar N**
Ph.D Music, Department of Humanities and Social Science, Jain University, Bengaluru, Karnataka, India

**Correspondence**
**Chethana Achar N**
Ph.D Music, Department of Humanities and Social Science, Jain University, Bengaluru, Karnataka, India

# ದಾಸಾಂತರಂಗದಲ್ಲಿ ಜಗತ್ತು

## Chethana Achar N

‘ಮಣ್ಣಿಂದ ಕಾಯ ಮಣ್ಣಿಂದ’ ಎಂಬ ವಿರಕ್ತಿಯ ನುಡಿಯಿಂದ ವಿಸ್ತರಿಸಿದ ದಾಸನುಡಿ ಸಚ್ಚಿದಾನಂದ ಸ್ವರೂಪನ ನೆರಳಿನಲ್ಲೇ ಸಾಗುತ್ತಾ ಅನುಭವದಲ್ಲಿ ಅರಳಿದ ಕುಸುಮಗಳಾದ ದಾಸರು ಕಂಡ ಜಗತ್ತು, ಲೌಕಿಕಾಲೌಕಿಕ ವಿಶೇಷ ಅನುಭವದ ವೀಥಿಯಲ್ಲೇ ಸಾಗುತ್ತಾ, ಪೀಳಿಗೆಗಳಿಗೆ ನಿರಂತರ ಅಧ್ಯಾತ್ಮದ ಜ್ಞಾನಾಮೃತಧಾರೆಯನ್ನು ಹರಿಸುತ್ತಾ ನೀಡಿದ ಸಂದೇಶ ಯುಗಯುಗಗಳಿಗೂ ಚಿರಂತನ.
ಜೀವನದ ಗತಿ ಮತ್ತು ಪ್ರಗತಿಯ ವ್ಯತ್ಯಾಸದ ಬೆನ್ನಲ್ಲೇ ಸಾಗಿದಾಗ ಪ್ರಗತಿ ಇಲ್ಲದ ಗತಿಗೆ ಪ್ರಾಧಾನ್ಯತೆ ಇಲ್ಲ. ಕುದುರೆಯ ನಡಿಗೆಯಂತೆ ಈ ಜೀವನ. ಭಗವಂತನೆಡೆ ನಿಮ್ಮ ನಡೆ ಅಥವಾ ಗತಿ ಇದ್ದರೆ ಮಾತ್ರ, ಅದಾವಾಗ ಪ್ರಗತಿಯೆನಿಸಿ ಇದೇ ಮೋಕ್ಷದ ಗತಿ, ಇದೇ ಸಾರ್ಥಕ ಗತಿ ಎಂದು ವಿಧವಿಧದಿಂದ ತಿಳಿ ಹೇಳಿದ ಮಹಾತ್ಮರು ದಾಸ ಕೂಟದವರು. ಅಧ್ಯಾತ್ಮತತ್ವವೆಂಬ ಮಹಾವೃಕ್ಷದಡಿ ನೆರಳಿರಬೇಕಾದರೆ ಹಿಂದೆ ಅದಾವುದೋ ಮಹಾತ್ಮ ಗಿಡ ನೆಟ್ಟು, ಜ್ಞಾನವೆಂಬ ನೀರೆರೆದು ಬೆಳೆಸಿರಬೇಕಲ್ಲವೇ? ಆ ಅಧ್ಯಾತ್ಮ ನೆರಳಿನೆಡೆಗೆ ನಾವು, ಕಾರಣರಾದವರ ಚಿಂತನೆಗಳನ್ನು, ಆದರ್ಶಗಳನ್ನು ಬಿಂಬ ಪ್ರತಿಬಿಂಬದ ತತ್ವಾಧಾರಿತ ಅನುಭವದ ಲೌಕಿಕಾಲೌಕಿಕ ವಿಚಾರಗಳನ್ನು ಸಾಧ್ಯವಾದಷ್ಟು ಚಿಂತನೆ ನಡೆಸಿ ಜೀವನ ಸಾರ್ಥಕ ಪಡಿಸೋಣ ಎನ್ನುವ ಹಂಬಲದಿಂದ ದಾಸಕೂಟದ ಹಲವು ಅಲೌಕಿಕ ವಾಙ್ಮಯದಡಿ ಲೌಕಿಕ ವಿಚಾರಗಳ ಕಿರು ವಿಮರ್ಶೆ ಈ ಲೇಖನ.
ಜೀವನದಲ್ಲಿದ್ದು ಈಸಿ, ಇದ್ದು ಜೈಸಬೇಕು ಎನ್ನುವ ಪುರಂದರದಾಸರ ನಲ್ನುಡಿಯಂತೆ ದಾಸರು ಬಿಚ್ಚಿಟ್ಟ ಜೀವನಾದರ್ಶಗಳು, ವ್ಯವಹಾರ, ವೈದ್ಯಪದ್ಧತಿ, ಸಂಗೀತ, ದ್ರವ್ಯಮಹಾತ್ಮೆ, ಸೌಂದರ್ಯ ಹಾಗೂ ಇದರೊಡನೆ ಮಿಳಿತವಾದ ಸಂಕೀರ್ತನ ವಿಚಾರಗಳು –ಹೀಗೆ ಹಲವು ವಿಷಯಗಳ ಸೂಕ್ಷ್ಮಾವಲೋಕನದ ಪ್ರಯತ್ನದಲ್ಲಿ ಈ ಲೇಖನ.

**ವ್ಯವಹಾರ**

ಭಾವಿಸಮೀರ ವಾದಿರಾಜರ ಅರ್ಥಬಾಹುಳ್ಯವಿರುವ ಕನ್ನಡದಲ್ಲಿರುವ ಮಹಾನ್‌ಕೃತಿ ‘ಲಕ್ಷ್ಮೀಶೋಭನೆ’ಯ ಹಾಡು. ಇದರ ಒಂದು ಚರಣ–

> ಪಾಲ ಸಾಗರವನ್ನು ಲೀಲೆಯಲಿ ಕಡೆಯಲು ಬಾಲೆಮಹಲಕ್ಷುಮಿ ಉದಿಸಿದಳು ।
> ಬಾಲೆ ಮಹಲಕ್ಷುಮಿ ಉದಿಸಿದಳಾ ದೇವಿ ಪಾಲಿಸಲಿ ನಮ್ಮ ವಧೂವರರ ॥

ಇದನ್ನು ಮೂರು ರೀತಿಯಾಗಿ ಅರ್ಥೈಸಬಹುದು –

1. ಮಹಾಲಕ್ಷ್ಮೀಯ ಅವತಾರ
2. ಭಾವಾರ್ಥದಿಂದ ಲಕ್ಷ್ಮೀದೇವಿಯನ್ನು ‘ಜ್ಞಾನರೂಪಳಾಗಿ’ ತಿಳಿದಾಗ ಸಂಸಾರದಲ್ಲಿದ್ದು ಕೊಂಡು ಲೀಲೆಯಿಂದ ಅಂದರೆ ಒಳಿತು–ಕೆಡುಕುಗಳನ್ನು ಸರಿಯಾಗಿ ತಿಳಿದು ಶುದ್ಧ ಮನಸ್ಸಿನಿಂದ ಭಗವಂತನನ್ನು ತಿಳಿಯಲು ಪ್ರಯತ್ನಿಸಿದಾಗ ‘ಲಕ್ಷ್ಮೀ’ಯ ಅಂದರೆ ತತ್ವಜ್ಞಾನದ ಉಗಮವಾಗುತ್ತದೆ. ಭಗವಂತನ ಒಲುಮೆ ನಮಗಾಗಿ, ಆತ್ಮೋದ್ಧಾರವಾಗುತ್ತದೆ.
3. ಆಧುನಿಕ ಜೀವನ ಜಂಜಾಟಕ್ಕೆ ಹೋಲಿಸಿದರೂ ವ್ಯವಹಾರ ಸಾಗರದಲ್ಲಿ ಒಳಿತು ಕೆಡುಕುಗಳನ್ನು ಸರಿಯಾಗಿ ತಿಳಿದು, ‘ಲೀಲೆ’ಯಿಂದ ಚಾಣಾಕ್ಷತನದಿಂದ ವ್ಯವಹಾರ, ವ್ಯಾಪಾರ ಮಾಡಿದರೆ ‘ಲಕ್ಷ್ಮೀಯ ಆಗಮನ, ಧನಾಗಮನ ಸಂಸಾರ ಪಾಲನೆಗೆ ಸಂಸಾರ ಸಾಗರದಲ್ಲಿದ್ದುಕೊಂಡು ಭಗವಂತನೆಡೆಗೆ ಸಾಗುವ ಪ್ರಯತ್ನ ಸುಲಲಿತ ಎಂದೂ ವ್ಯವಹಾರರೀತ್ಯಾ ಊಹಿಸಬಹುದು.

ಹೀಗೆ ಹಿಂದೆ ವೃತ್ತಿಯಲ್ಲಿ ವ್ಯಾಪಾರಿಯಾಗಿದ್ದ ಪುರಂದರದಾಸರಂತೂ ವಿಶಿಷ್ಟವಾಗಿ ಜನಮಾನಸದಲ್ಲಿ ಯಾವ ವಸ್ತುವಿಗೆ ಬೇಡಿಕೆ ಇತ್ತೋ ಅದನ್ನೇ ಉತ್ಪ್ರೇಕ್ಷಿಸಿ ಕೃತಿ ರಚಿಸಿರುವುದು. ಹಣ್ಣಾಗಲಿ, ಕಲ್ಲುಸಕ್ಕರೆಯಾಗಲಿ, ಲೌಕಿಕ ಜೀವನಾಧಾರಕ್ಕಾಗಿ ಉಪಯೋಗಿಸುವ ಆಭರಣಗಳೇ ಮುಂತಾದ ವಿಷಯಗಳನ್ನೇ ಮುಖ್ಯ ಮಾರಾಟವಸ್ತುವೆಂದು ಪರಿಗಣಿಸಿ ತನ್ಮುಖೇನ ಅದರಲ್ಲಿ ಭಗವಂತನನ್ನು ಬಿಂಬಿಸಿ 'ಅದನ್ನು ಕೊಳ್ಳಿರಿ' ಅಂತರಾರ್ಥದ ಹಿರಿಮೆ ಇರುವ, ನಿಮ್ಮ ನಿಮ್ಮ ಯೋಗ್ಯತಾನುಸಾರವಾಗಿ 'ಹಣ್ಣು' 'ಮುತ್ತು' ಶಬ್ದದೊಳಗಿನ ಭಗವಂತನನ್ನು ತಿಳಿದುಕೊಂಡು ಆತ್ಮೋದ್ಧಾರ ಮಾಡಿಕೊಳ್ಳಿ ಎಂದು ಸ್ವಾರಸ್ಯಪೂರ್ಣವಾಗಿ ಕೃತಿರಚನೆ ಮಾಡಿರುತ್ತಾರೆ. ಕೃತಿರಚನೆಯಾಗಿದ್ದ ಸಾಮಾಜಿಕ ಪರಿಸರ ಉದಾ: ಜನಸಂದಣಿಯ ಮಾರುಕಟ್ಟೆ, ಸಂತೆ ಬೀದಿಗಳಲ್ಲಿ ಇಂತಹ ವಿಶಿಷ್ಟ ನಾಮಸ್ಮರಣೆ ತಮ್ಮ ಆತ್ಮೋದ್ಧಾರದ ಜೊತೆ ಇತರ ಸಾತ್ವಿಕ ಯೋಗ್ಯತೆ ಉಳ್ಳ ಸದ್‌ಭಕ್ತರ ಆತ್ಮೋದ್ಧಾರಕ್ಕೆ ಕರೆನೀಡುವ ಮಹಾತ್ಮರ ದಾಸರ ಭಗವತ್ಪ್ರಜ್ಞೆ ಸದಾ ಸ್ಮರಣೀಯ.

ಹಣ್ಣು ಕೊಂಬುವ ಬನ್ನಿರಿ ಹರಿದಾಸರು ।
ಚೆನ್ನ ಬಾಲಕೃಷ್ಣನೆಂಬ ಕನ್ನೆಗೊನೆ ಬಾಳೆಹಣ್ಣು ॥

ಭಗವಂತನ ಮಹಿಮೆಗಳನ್ನು ಒಂದೊಂದಾಗಿ ನೆನೆಯುತ್ತಾ ಪಾಡುತ್ತಾ ಭಗವಂತನನ್ನು ತಿಳಿಯಲು ಪ್ರಯತ್ನಿಸಿ ಎನ್ನುವ ಕರೆ ಕನಕದಾಸರದ್ದು–

ಮುತ್ತು ಕೊಳ್ಳಿರೋ ಜನರು ಮುತ್ತು ಕೊಳ್ಳಿರೋ ।
ಸಚ್ಚಿದಾನಂದ ದಿವ್ಯ ಜ್ಞಾನವೆಂಬ
ದಾರದಲ್ಲಿ ಪೋಣಿಸಿದ ದಿವ್ಯ ಮುತ್ತು ॥

ತಾನನುಭವಿಸಿದ ದಿವ್ಯಾನುಭೂತಿಯನ್ನು ಭಕ್ತರೆಡೆಗೂ ಚಾಚಿ, ನೀವು ಬೆಲೆಕಟ್ಟಲಾಗದ ದಿವ್ಯ ಜ್ಞಾನದಿಂದ ಪೋಣಿಸಿದ ಸಚ್ಚಿದಾನಂದ ಮುತ್ತನ್ನು ಖರೀದಿಸಿ, ಧರಿಸಿ ಸಾರ್ಥಕರಾಗಿ ಮುಕ್ತಿಯನ್ನು ಹೊಂದಿ ಎಂದಿದ್ದಾರೆ ನಾರದಾಂಶರಾದ ಶ್ರೀ ಪುರಂದರದಾಸರು.
'ಕಲ್ಲುಸಕ್ಕರೆ ಕೊಳ್ಳಿರೋ ನೀವೆಲ್ಲರೂ । ಶ್ರೀಕೃಷ್ಣನಾಮವೆಂಬ' ಇಡೀ ಕೃತಿಯಲ್ಲಿ ವ್ಯವಹಾರದ ಶಿರೋನಾಮೆಗಳೆಲ್ಲಾ ಅಡಗಿರುವುದು ಇಲ್ಲಿ ಕಾಣುತ್ತೇವೆ. ಎತ್ತು ಹೇರುಗಳಿಂದ ಹೊತ್ತು ಮಾರುವುದಲ್ಲ. ಸಾಗಾಟ, ಬಾಡಿಗೆ, ಸುಂಕ, ಹಾಳಾಗದಿರುವ ಒಳ್ಳೆಯ ಮಾಲು, ಬೇರೆಡೆ ಎಲ್ಲೂ ಸಿಗದ ಕಲ್ಲುಸಕ್ಕರೆ –ಹೀಗೆ ಮಾರುಕಟ್ಟೆಯ ಜಾಹಿರಾತನ್ನು ವೈಶಿಷ್ಟ್ಯಪೂರ್ಣವಾಗಿ ಕೃತಿಗಳಲ್ಲಿ ಪೋಣಿಸಿ, ರಚಿಸಿ, ಜನಾಕರ್ಷಣೆಗೆ ಹೊಸ ರೂಪವನ್ನು ವ್ಯವಹಾರದ ಭಾಷೆಯಲ್ಲಿ ಇಲ್ಲಿ ಕೊಟ್ಟಿರುವರು.
ವ್ಯವಹಾರದ ಶೀರ್ಷಿಕೆಯಡಿ ದಾಸರು ಬಳಸಿದ್ದು, ಗಳಿಸಿದ್ದು, ಬಡಿಸಿದ್ದು ಅರವಿಂದಾಕ್ಷನ ಅದಮ್ಯ ಮಹಿಮೆಯ ಭಂಡಾರವನ್ನು, ಅವರು ಬಡಿಸಿ, ನಾವು ಗಳಿಸಿದರೆ ಮಾತ್ರ ಬದುಕು ಸಾರ್ಥಕ. ದಾಸದಾಸರ ದಾರಿ ಧರ್ಮಜಾಗೃತಿಯೆಡೆಗೆ, ಧರ್ಮರಕ್ಷಕನಿದ್ದೆಡೆಗೆ ಎನ್ನುವ ಚಿಂತನೆಯೊಂದಿಗೆ 'ವ್ಯವಹಾರ'.

**ವೈದ್ಯಪದ್ಧತಿ**

ದಾಸ ಪುರಂದರರು ನಡೆದಾಡುವ ವಿಶ್ವಕೋಶವೇ ಸರಿ. ತಿಳಿಯದ ವಿಷಯಗಳಿಲ್ಲ; ತಿಳಿಸಿದ ವಿಷಯಗಳಿಲ್ಲ; ತಿಳಿದು ತಾಳಿ ಬಾಳಲು ನಾವೆಷ್ಟು ತಯಾರಾಗಿದ್ದೇವೆ ಎಂಬುದರ ಸತ್ಯ ತಿಳಿದಾಗ ದಾಸರ ಒಂದೊಂದೇ ಗಹನ ವಿಚಾರಗಳ ಸರಣಿ ತೆರೆಯುತ್ತಾ ಹೋಗುತ್ತದೆ.
'ವೈದ್ಯೋ ನಾರಾಯಣೋ ಹರಿಃ' ವೈದ್ಯ ನಾರಾಯಣನನ್ನು ತಿಳಿಯಲು ವೈದ್ಯ ಪುರಂದರರು ಪ್ರಯತ್ನಿಸಿದಾಗ ಶ್ರೀ ಧನ್ವಂತರಿಯ ಅಸ್ತಿತ್ವ, ಆತನ ನಾಮಸ್ಮರಣೆಯೊಂದಿಗೆ ಆಯುರ್ವೇದದ ವೈದ್ಯದ ಚಾವಡಿಯಲ್ಲಿ ಅರಳುತ್ತಾ–

ಇದ ಕೊಳ್ಳಿ ಭವರೋಗಕೌಷಧವನು ।
ವಿವಿಧ ರೋಗಗಳಿಗೆ ವಿವಿಧ ಔಷಧಗಳು ।
ಇಂದ್ರಿಯ ಜಯಿಸುವುದೆ ಇದಕೆ ಇಚ್ಛಾಪಥ್ಯ ॥

ಭಗವಂತನ ನಾಮಸ್ಮರಣೆಯೊಂದಿಗೆ ಮಿಲಿತವಾಗಿ ದಾಸರ ವೈದ್ಯಕೀಯ ಜ್ಞಾನದ ಮಹಾ ಅಂಗಳಕ್ಕೆ ಕಾಲಿಟ್ಟಂತಾಗಿ ಮುಕ್ತಾಯ ಭಗವನ್ನಾಮಸ್ಮರಣೆಯ ಪರಮ ಪಾವನವಾದ ನಾಮಸಂಕೀರ್ತನೆಯೊಂದಿಗೆ ಪರಿಸಮಾಪ್ತವಾಗುತ್ತದೆ.
ವಾತ ವಿಧ್ವಂಸಿನೀ, ಮಂಡೂಕ, ಜ್ವರಾಂಕುಶ, ವಸಂತ ಕರ್ಪೂರ, ದಿವ್ಯಸಿಂಧೂರ, ದಿವ್ಯ ತಾಮ್ರಭಸ್ಮ, ಲೋಹಭಸ್ಮ, ವಂಗಭಸ್ಮ, ಸ್ವರ್ಣಭಸ್ಮ, ಶ್ಲೇಷ್ಮಕುಠಾರ, ವಸಂತ ಕುಸುಮಾಕರ, ಕರ್ಣಚೂರ್ಣ ಮಾಲ್ಯವಸಂತ, ಆಯುರ್ವೇದದ ಚಿಕಿತ್ಸಾ ರೀತಿ –ಹೀಗೆ ವಿಸ್ತಾರವಾಗುತ್ತದೆ.
ವಿಜಯದಾಸರು ಜೀವಿಯ ದೇಹಾಂತರ್ಗತ ವಾಯುವಿನ ಪ್ರಾಮುಖ್ಯತೆಯನ್ನು ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನವೆಂಬ ಪಂಚರೂಪಗಳನ್ನು 'ಪವಮಾನ ಜಗದಾ ಪ್ರಾಣ' ಎಂಬ ಕೃತಿಯಲ್ಲಿ ವಿಶದಪಡಿಸಿದ್ದಾರೆ. ಭಗವಂತನ ನಿತ್ಯ ನಾಮಸ್ಮರಣೆಗೆ ಸದೃಢಕಾಯದ ಕಾಯುವಿಕೆ, ಜೋಪಾನ ಮಾಡುವಿಕೆ ಹಾಗೆಯೇ ಮನಸ್ಸಿನ ಶುದ್ಧಿಗೆ ವಿಜಯದಾಸರು, ಯೋಗ್ಯರೀತ್ಯಾ ಚಿತ್ತಶುದ್ಧಿಗೆ, ದೇಹಾರೋಗ್ಯಕ್ಕೆ ಪ್ರಾಣಾಯಾಮದ ಮಹತ್ವವನ್ನು ತಮ್ಮ ಕೃತಿಯಲ್ಲಿ ಸ್ಪಷ್ಟವಾಗಿ ತಿಳಿಸಿರುತ್ತಾರೆ. ರೇಚಕ, ಪೂರಕ, ಕುಂಭಕಯುಕ್ತವಾಗಿ ಪ್ರಾಣಾಯಾಮ ಮಾಡುವುದರಿಂದ ಚಿತ್ತಶುದ್ಧಿಯಾಗಿ ಭಗವಂತನ ಉಪಾಸನೆಗೆ ಸಹಕಾರಿಯಾಗುತ್ತದೆ ಎಂಬುದನ್ನು ತಮ್ಮ ಕೃತಿಯಲ್ಲಿ ಹೇಳಿರುತ್ತಾರೆ.

ಹಿರಿಯ ನಾಡಿಯಿಂದ ಮರುತನ್ನ ಮೆಲ್ಲಗೆ ।
ಶಿರಸಿ ಪರಿಯಂತರ ತರಲುಪಾಯವನ್ನು ।
ಕರಣಶುದ್ಧನಾಗಿ ಪರಿಚಿಂತಿಸಬೇಕು ಪರಮೂರ್ತಿ ಧ್ಯಾನ ।
ವಿಜಯವಿಠಲ ಹರಿಯ ಕುರುಹ ನಿರೀಕ್ಷಿಸಿ ಪತಿಕರಿಸಿ ಸಜ್ಜನಸಂಗ ॥

ಯೋಗದಲ್ಲಿ ಬರುವ ಪ್ರಾಣಾಯಾಮದಲ್ಲಿ ಶುದ್ಧ ವಾಯುವಿನ ಹತೋಟಿಯ ಕ್ರಮವನ್ನು ಅಂಕಿಗಳ ಸಹಾಯದಿಂದ ಗಣನೆ ಮಾಡುತ್ತಾ ಧಾರಣ ಮಾಡುವ ಕ್ರಮವನ್ನು ಸ್ಪಷ್ಟ ತಿಳಿಸಿರುವರು. ಇದರಿಂದ ಚಿತ್ತಶುದ್ಧಿಯಾಗಿ ಭಗವಂತನನ್ನು ಧ್ಯಾನಿಸುವುದು ಸುಲಭ ಎಂದು ಪ್ರತಿಪಾದಿಸಿರುವರು.

**ಮನಸ್ಸು**

'ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನರಸಂ ಫಣಿಃ' ಎನ್ನುವ ಉಕ್ತಿಯಂತೆ ಸಂಗೀತದಿಂದ ಕೂಡಿದ ಸಾಹಿತ್ಯ ಮನಸ್ಸಿಗೆ ಅತಿ ಶ್ರೇಷ್ಠ ಪರಿಣಾಮ ನೀಡುತ್ತದೆ. ಇದಕ್ಕಾಗಿಯೇ ಏನೋ ಎಲ್ಲ ದಾಸವರೇಣ್ಯರು ಜೀವನ ಜಂಜಾಟದಿಂದ ಬೆಂದ ಜನಸಾಮಾನ್ಯರ ಬಳಿಗೆ ಹೋಗಿ ಸಾಂತ್ವನ ನೀಡುವ ಭಗವನ್ನಾಮಸ್ಮರಣೆಯ ಮಹತ್ವವನ್ನು ತಿಳಿಸಿ ಸಂಗೀತದ ಮೂಲಕ ಮನಸ್ಸಿಗೆ ಮುದ ನೀಡುವ ಮಾಧವನ ಸ್ಮರಣೆ ಮಾಡುವಂತೆ ಪ್ರೇರೇಪಿಸಿದರು. ಸನ್ಮಾರ್ಗದಲ್ಲಿ ನಡೆದು ಪರಗತಿಗೆ ಪ್ರಾಪ್ತವಾಗುವ ಜ್ಞಾನ ನೀಡಿದರು. ನಿತ್ಯತೃಪ್ತನ ನಿರಂತರ ನಾಮಸ್ಮರಣೆ ಸುಪ್ತ ಮನಸ್ಸಿಗೆ ಪರಿಣಾಮ

ಬೀರಿ ಲೌಕಿಕ ಚಿತ್ತಚಾಂಚಲ್ಯ ದೂರವಾಗಿ ಇಹಸುಖವ ಮರೆತು, ಪರಸುಖದ ಗುಂಗಿನಲ್ಲಿ ಇರುವಂತೆ ಮಾಡಿ ಭಗವಂತನ ಪ್ರಸಾದದ ಪರಮಸುಖಕ್ಕೆ ದಿವ್ಯಮಾರ್ಗದರ್ಶನದ ಅಡಿಪಾಯವನ್ನು ದಾಸರು ಹಾಕಿಕೊಟ್ಟರು. ಶಿಸ್ತುಬದ್ಧ ಜೀವನ, ನಾಮಸಂಕೀರ್ತನ, ಅಲ್ಪತೃಪ್ತರಾಗಿ, ಧರ್ಮದ ಹಾದಿಯಲ್ಲಿ ಸುಗಮವಾಗಿ ನಡೆದು ಮಾನಸಿಕ ದೃಢತೆಯನ್ನು ನಿರಾಯಾಸವಾಗಿ ಪಡೆದು ಸ್ವಸ್ಥ ಮಾನಸರಾಗಿ ಏಕಚಿತ್ತದಿಂದ ಭಗವಂತನೆಡೆಗೆ ಸಾಗಲು ಈ ಅಂಶಗಳು ವಿಶೇಷ ಸಹಕಾರಿಯಾಯಿತು.

ಯೋಗ್ಯತೆಯುಳ್ಳ ಜೀವಿಗೆ ಸಾಧನೆ ಗೈಯಲು, ಮಾನಸಿಕ ತೊಳಲಾಟದಿಂದ ಮುಕ್ತಿ ಪಡೆಯಲು ಅದೆಷ್ಟೋ ಲಕ್ಷಲಕ್ಷ ಕೃತಿಗಳು ಭಗವಂತನ ನಾಮಸ್ಮರಣೆಯೊಂದಿಗೆ ಮಿಳಿತವಾಗಿ ದಾಸವರೇಣ್ಯರ ವಾಗಮೃತದಿಂದ ಹೊರಹೊಮ್ಮಿ ನಿರಂತರವಾಗಿ ಸಾರ್ವಕಾಲಿಕ ಮೌಲ್ಯವುಳ್ಳದ್ದಾಗಿ ಇಂದಿಗೂ ಚಿರಂತನವಾಗಿದೆ. ಇದರಿಂದ ಪ್ರಭಾವಿತರಾದ ಅದೆಷ್ಟೋ ಜನಸಾಮಾನ್ಯರು ತಾವೂ ಅದೇ ಮಾರ್ಗದಲ್ಲಿ ನಡೆದು, ತಮ್ಮ ಅನುಭವ ಹಾದಿಯಲ್ಲಿ ತಮ್ಮದೇ ಆದ ಮಾತಿನಿಂದ ಮುಂದಿನ ಪೀಳಿಗೆಗೆ ತಮ್ಮ ಆತ್ಮಾನುಭವದ ಕ್ಷಣಗಳನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಬಡಿಸುತ್ತಾ, ಕಾಲಕ್ಕೆ ತಕ್ಕಂತೆ ಲೌಕಿಕ ಜಗತ್ತಿಗೆ ಅಲೌಕಿಕ ಅನುಭವವನ್ನು ಇಂದಿಗೂ ನೀಡುತ್ತಿರುವರು.

'ತ್ರಿಕರಣಪೂರ್ವಕ ಭಕ್ತಿ'(ಕಾಯಾ, ವಾಚಾ, ಮನಸ್ಸು) ಸುದೃಢವಾಗುವುದು, ದಾಸರು ಹಾಕಿಕೊಟ್ಟ ಸನ್ಮಾರ್ಗದ ಆಚಾರ ಮತ್ತು ವಿಚಾರವಿರುವ ಒಳ್ಳೆಯ ಮಾತುಗಳ ಸಂಸರ್ಗದಿಂದ ಮಾತ್ರ. ಸುದೃಢ ಭಕ್ತಿಯಲ್ಲಿ ಈ ಎಲ್ಲವೂ ಅಡಕವಾಗಿರುವುದರಿಂದ ಸಾನುರಾಗದ ನಿತ್ಯಹರಿಸ್ಮರಣೆಯಿಂದ ಇವೆಲ್ಲದರ ಸಿದ್ಧಿ ಸಾಧ್ಯ ಎನ್ನುವ ಮಾತು ಅಕ್ಷರಶಃ ಸತ್ಯ.

'ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಮ್' ಎನ್ನುವಂತೆ ಪ್ರತಿ ಹನಿಯೂ ಸಮುದ್ರವನ್ನು ಸೇರುವಂತೆ, ಪ್ರತಿ ನಾಮಸ್ಮರಣೆಯೂ ನಮಸ್ಕಾರವೂ ಭಗವಂತನಿಗೆ ಸೇರುವುದಾದರೂ ಅದರಲ್ಲಿರುವ ಆತ್ಮನ ತುಡಿತ ಆತನೆಡೆಗೆ ಶೀಘ್ರ ಸಾಗಲು ಮುಖ್ಯವಾಹಿನಿ.

ದ್ರವ್ಯ, ಹಣ
ಹಣವೇ ನಿನ್ನಯ ಗುಣವೇನು ಬಣ್ಣಿಪೆನೋ
ಹಣವಿಲ್ಲದವನೊಬ್ಬ ಹೆಣಕೆ ಸರಿಕಂಡ್ಯಾ ॥

ಭಾವಿಸಮೀರ ಶ್ರೀ ವಾದಿರಾಜರ ಈ ಕೃತಿ ಸಾರ್ವಕಾಲಿಕವಾದದ್ದು. ಯೋಗ್ಯತೆ ಇಲ್ಲದಿದ್ದರೂ ಅಯೋಗ್ಯನನ್ನು ಯೋಗ್ಯನನ್ನಾಗಿ ಮಾಡುತ್ತದೆ ಈ ಹಣ. ಕೆಟ್ಟ ಕುಲದವರಿಗೆ ಸತ್ಕುಲವನ್ನೀವುದು. ಭೋಗಲಾಲಸೆಗಳು ಅತಿಶಯವಾಗುವುದು. ಕುರೂಪಿಯೂ ಸುರೂಪಿಯಾಗುವನು. ಅಂಧನಿಗೂ ಮದುವೆ ಮಾಡಿಸುವ, ಮೂರ್ಖನನ್ನು ಜ್ಞಾನಿಯಾಗಿಸುವ ಮಹತ್ವ ಈ ಹಣಕ್ಕಿದೆ. ಸಿರಿ ಹಯವದನನನ್ನು ಮರೆಸುವಂತೆ ಮಾಡುವುದು ಈ ಹಣ ಎಂದು ಶ್ರೀ ವಾದಿರಾಜರು ಹಣದ ಗುಣವನ್ನು ವಿಶ್ಲೇಷಿಸಿರುವರು.

ಹಣವೆನಲು ಹಣವಲ್ಲ ಹಣವಿಲ್ಲದವರಿಲ್ಲ ಎಂದು ಗುರು ರಾಮವಿಠಲದಾಸರು ಬ್ರಾಹ್ಮಣರಿಗೆ ವಿದ್ಯೆ, ತಪಸ್ಸು, ಊಂಛವೃತ್ತಿಗಳೇ ಹಣ. ಕ್ಷತ್ರಿಯರಿಗೆ ಶೌರ್ಯ, ವೈಶ್ಯರಿಗೆ ವ್ಯಾಪಾರದ ಯುಕ್ತಿ, ಶೂದ್ರರಿಗೆ ಕೃಷಿ–ಪರಿಚಾರಿಕೆಯೇ ಹಣ. ಮೋಸ ಮಾಡದೇ, ನಿಷ್ಕಪಟವಾಗಿ ಅತಿಲಾಭ ಬಯಸದೆ ಧರ್ಮದಿಂದ ಗಳಿಸಿದ ದ್ರವ್ಯ –ಅದುವೇ ಪುಣ್ಯದ ಹಣ ಎಂದರು. ಸಾತ್ವಿಕರಿಗೆ ಭಗವಂತನಲ್ಲದೇ ಇತರರಿಂದ ಯಾಚನೆಯು, ರಾಜಸರಿಗೆ ಅತ್ಯಾಸೆ, ತಾಮಸರಿಗೆ ಚಾಡಿ ನಿಂದನೆಗಳು ಪುಣ್ಯರಾಶಿಯನ್ನು ನಾಶಮಾಡಬಲ್ಲವು. ಆದುದರಿಂದ ಸತ್ಯಸಂಕಲ್ಪ ಭಗವಂತನನ್ನು ಸ್ಮರಿಸುವವರಿಗೆ ಪುಣ್ಯದ ಹಣ ಕೈತುಂಬ ಇರುವುದು ಎಂದು ಮಾರ್ಮಿಕವಾಗಿ ಹಣದ ಮಹಿಮೆಯನ್ನು ಹೇಳಿರುತ್ತಾರೆ.

ಶ್ರೀ ಪುರಂದರದಾಸರು 'ರೊಕ್ಕ ಎರಡಕ್ಕು ದುಃಖ ಕಾಣಕ್ಕ' ಎಂದು ಲೌಕಿಕ ಜೀವನದಲ್ಲಿ ಹಣದ ಮಹಿಮೆಯನ್ನು, ಕುಂದುಕೊರತೆಗಳನ್ನು ಬಹು ವಿಶಿಷ್ಟವಾಗಿ ಪೋಣಿಸಿದ್ದಾರೆ. ಜೀವನದ ಲೌಕಿಕ ಸುಖಕ್ಕೆ ರೊಕ್ಕ ಅನಿವಾರ್ಯ. ಆದರೂ ರೊಕ್ಕದ ದುಃಖವೆಂದರೆ ವಿಠಲನ ಮರೆಸುವ ಶಕ್ತಿ. ಅಧರ್ಮಕ್ಕೆ ಪೂರಕ ರೊಕ್ಕವ ಸುಟ್ಟು ಅಂತಹ ರೊಕ್ಕದ ಸಹವಾಸದಿಂದ ದೂರವಿದ್ದು ವಿಠಲನ ಚಿಂತಿಸುತ್ತಾ ನಿಜ ರೊಕ್ಕ ಗಳಿಸಿ, ಧರ್ಮದ ದಾರಿಯಲ್ಲಿದ್ದು ಮುಕ್ತಿಯೆಡೆಗೆ ನಡೆ ಎಂದು ವೈಶಿಷ್ಟ್ಯಪೂರ್ಣವಾಗಿ ವಿವರಿಸುತ್ತಾರೆ.

ದುಗ್ಗಾಣಿ ಎಂಬುದು ದುರ್ಜನ ಸಂಗ
ದುಗ್ಗಾಣಿ ಬಲು ಕೆಟ್ಟದಣ್ಣ ॥

ಎಂದು ಹಣದಿಂದಾಗುವ ಅವಾಂತರಗಳನ್ನು ವಿವಿಧ ಕೋನದಿಂದ ಅವಲೋಕಿಸಿ ರಚಿಸಿದ ಈ ಕೃತಿಯಲ್ಲೂ ದುಗ್ಗಾಣಿಗೆ ಭಗವಂತನ ಮರೆಸುವ ಶಕ್ತಿ ಇದೆ ಎಂಬುದನ್ನು ತಿಳಿಹೇಳಿದ್ದಾರೆ. ನಶ್ವರ ದುಗ್ಗಾಣಿಗಿಂತ ಈಶ್ವರಚಿಂತನೆ ದುಗ್ಗಾಣಿಯೇ ಸರ್ವಶ್ರೇಷ್ಠ ಎಂದು ಸರ್ವ ಹರಿದಾಸರುಗಳು ಘಂಟಾಘೋಷವಾಗಿ ಸ್ಪಷ್ಟಪಡಿಸಿದ್ದಾರೆ.

**ಸಂಗೀತ**

ಶ್ರೀ ವಾದಿರಾಜರು, ಶ್ರೀ ವ್ಯಾಸರಾಜರು ಕರ್ನಾಟಕ ಸಂಗೀತದ ಪಿತಾಮಹರೆನಿಸಿದ ಪರಂದರ ದಾಸರು, ಶ್ರೀ ಕನಕದಾಸರು ಇವರುಗಳು ಕೃತಿಗಳನ್ನು ರಚಿಸಿದ ಸಂದರ್ಭಗಳನ್ನು ಕೃತಿರಚನಕಾರರ ಭಾವಪರವಶತೆಯ ಮೂಲ ಸೊಬಗನ್ನು ಕಂಡುಕೊಳ್ಳುವ ಪ್ರಯತ್ನ. ಪ್ರಾಚೀನ ಕಾಲದ ಬತ್ತೀಸ (೩೨) ರಾಗಗಳು ಹಾಗೂ ಉತ್ತರದೇಶದ ಹಲವು ರಾಗಗಳು ರಚನಾಕಾರರ ವಾಸ್ತವ್ಯದ ಗಡಿ ಭೌಗೋಳಿಕ ನೆಲೆಯ ದೆಸೆಯಿಂದ ಪ್ರಭಾವ ಬೀರುತ್ತಾ ದಕ್ಷಿಣಕ್ಕೆ ನುಸುಳಿ ದಾಸಸಾಹಿತ್ಯದೊಡನೆ ಸಂಗಮವಾಗಿ ನಿರಂತರವಾಗಿತ್ತು. ಸಾಹಿತ್ಯ ಸಂಗೀತಗಳು ಬಿಟ್ಟಿರಲಾರದ ನಂಟಿನಿಂದೊಡಗೂಡಿದೆ. ಆದರೂ ಸಂಗೀತವನ್ನೇ ಮುಖ್ಯವಾಗಿ ತೆಗೆದುಕೊಂಡರೆ ರಂಜಿಸುವ ಗುಣ ಸಂಗೀತಮಾತ್ರದಲ್ಲಿದೆ. ಸಾಹಿತ್ಯವಿಲ್ಲದೆಯೂ ರಂಜನೆಯ ಶಕ್ತಿ ಉದಾಹರಣೆಗೆ ವಾದ್ಯಸಂಗೀತದಂತೆ. ಆದರೆ ದಾಸಸಾಹಿತ್ಯ ಮಾತ್ರದ ರಂಜನೆಯ ಮಟ್ಟ ಮಿತಿಯಿಂದ ಕೂಡಿರುತ್ತದೆ. ಆದರೂ ದಾಸಸಾಹಿತ್ಯಕ್ಕೆ, ಸಂಗೀತ ರಾಗಮಾಲಿಕೆಯಾದಲ್ಲಿ ಮಾಧುರ್ಯವನ್ನು ಕಂಡುಕೊಳ್ಳಬಹುದು. ಸಾಹಿತ್ಯದಲ್ಲಡಗಿದ ಭಾವಪ್ರಕಟಣೆಗೆ ಮುಖ್ಯ ಹೇತು ಸಂಗೀತ. ಇದು ದೇಸಿ ಅಥವಾ ಮಾರ್ಗರೀತ್ಯಾ ಇರಬಹುದು. ಅಂತೂ ದಾಸಸಾಹಿತ್ಯ ಹಾಗೂ ಸಂಗೀತಗಳು ಅವಿನಾಭಾವ ಸಂಬಂಧದಿಂದ ಒಡಗೂಡಿದೆ.

ವ್ಯಾಸದಾಸಕೂಟದ ಕೃತಿರಚನಾಕಾರರಿಗೆ, ಆಗ ಪ್ರಸಿದ್ಧವಾದ ಸುಮಾರು ೩೨ ರಾಗಗಳ ಪರಿಚಯವಿದ್ದಿತ್ತು ಎನ್ನುವುದು ಶ್ರೀ ಪುರಂದರದಾಸರ ಕೃತಿಗಳನ್ನು ಅವಲೋಕಿಸಿದಾಗ ತಿಳಿಯುತ್ತದೆ.

ತತ್ತೂರು ತೂರೆಂದು ಬತ್ತೀಸ ರಾಗಗಳನು ।
ಚಿತ್ತವಲ್ಲಭ ತನ್ನ ಕೊಳಲನೂದಿದನು ॥ ಪ ॥
ಮಾಳವಿ ಸಾರಂಗ ರಾಗ ಕೇಳಿ ರಮಣಿಯರತಿ ದೂರದಿಂದ ।
ಫಲಮಂಜರಿ ಗೌಳಿ ದೇಶಾಕ್ಷರಿ ರಾಗಂಗಳನು
ನಳಿನನಾಭನು ತನ್ನ ಕೊಳಲನೂದಿದನು ॥ ೧ ॥

ಬತ್ತೀಸ ರಾಗಗಳೆಂದು ಹೇಳಿ ಕೆಲವನ್ನು ಮಾತ್ರ ಸೂಚಿಸಿರುವರು. ಮತ್ತೊಂದು ಪದ್ಯದಲ್ಲಿ–

ನಳಿನಜಾಂಡ ತಲೆಯ ತೂಗಿ ಮೋಹಿಸುತಿರಲು ।
ಕೊಳಲನೂದಿ ಭ್ರಾಜಿಸುವ ಚೆಲುವ ಕೃಷ್ಣರಾಜನ ನೋಡಿ॥ ಪ ॥
ಮಾರವ, ದೇಶಿ, ಗುಜ್ಜರಿ, ಭೈರವಿ, ಗೌಳಿ, ನಾಟಿ, ಸಾವೇರಿ, ಆಭೇರಿ ।
ಪೂರ್ವಿ, ಕಾಂಭೋಜಿ, ಪಾಡಿ, ದೇಶಾಕ್ಷಿ, ಶಂಕರಾಭರಣ, ಮಾಳವಿ ।
ವರಾಳಿ, ಕಲ್ಯಾಣಿ, ತೋಡಿ, ಮುಖಾರಿ, ವರಾಳಿ, ವಸಂತ, ಭೌಳಿ, ಧನಶ್ರೀ ।
ಸೌರಾಷ್ಟ್ರ, ಗುಂಡಕ್ರಿಯೆ, ರಾಮಕ್ರಿಯ, ಮೇಘ, ಕುರಂಜಿಯು ಪಾಡಲು ನೋಡಿ॥ ೩ ॥

ಇವಲ್ಲದೆ, ಇನ್ನೂ ಪಾಠಭೇದದಿಂದ ಹಲವು ರಾಗಗಳಿದ್ದಿರಬಹುದು.

**ಸೌಂದರ್ಯ**

ಅಪರೋಕ್ಷಜ್ಞಾನಿಗಳಿಗೆ ಲಕ್ಷ್ಮೀನಾರಾಯಣರ ಒಂದೊಂದು ಅವತಾರಗಳೂ, ರೂಪಗಳೂ ಸೌಂದರ್ಯಾತಿಶಯದಿಂದ ಗೋಚರಿಸುತ್ತಾ ವರ್ಣಿಸಲಸದಳವಾಗಿ ಬಿಡುತ್ತವೆ. ಪರಮಾತ್ಮನ ಸೌಂದರ್ಯವನ್ನು ಲಕ್ಷ್ಮೀದೇವಿ ತಿಳಿದಷ್ಟು ಬ್ರಹ್ಮವಾಯುಗಳು ತಿಳಿದಿಲ್ಲ. ಅನುಕ್ಷಣವೂ ಕೂಡ ಹೊಸ ರೂಪದಿಂದ ಹೊಸತನದಿಂದ ಸುಂದರರೂಪಿ ಲಕ್ಷ್ಮೀನಾರಾಯಣರ ದರ್ಶನಕ್ಕೆ ಅಪರಿಮಿತ ಉತ್ಸಾಹದಿಂದ ಏಕಾಂತಭಕ್ತರಾದ ಬ್ರಹ್ಮವಾಯುಗಳು ನಿರಂತರ ಕಾತರರಾಗಿರುವರು. ಹೀಗಿರುವಾಗ ಅಪರೋಕ್ಷಜ್ಞಾನಿಗಳು ಅವರ ದರ್ಶನಕಾತರರಾಗಿರುವುದು ಸಹಜವೇ.

ವಿಜಯದಾಸರು ತಮ್ಮ ಕೃತಿಯಲ್ಲಿ ಸೌಂದರ್ಯಪುರುಷನನ್ನು ವರ್ಣಿಸುತ್ತಾ "ಸೌಂದರ್ಯ ಪುರುಷನ ಕಣ್ದೆರೆದು ನೋಡಿದೆನು" – ಮುಕುಟ ಮುತ್ತಿನಹಾರ, ಮಕರಕುಂಡಲಧಾರ, ತುಲಸಿಸರ, ಉಂಗುರ ಕೈಬೆರಳ ಕರ ಶಂಖಪಾಣಿ, ಮುಂಗೈ ಕಡಗಕಂಕಣ, ಭುಜ ಬಾಹುಕೀರ್ತಿ, ಮುಂಗೈಯ ಫಣಿಯ ತಿಲಕ, ಪದದಲ್ಲಿ ಪೊಂಗೆಜ್ಜೆ. ಈ ರೀತಿ ಆಭರಣಗಳಿಂದ ಅಲಂಕೃತನಾದ ಸುಂದರಾಂಗ ಭಗವಂತನನ್ನು ನಾನು ನೋಡಿದೆ ಎಂದು ಹೇಳಿರುವರು. ಇಲ್ಲಿ ಇವರ ಸೌಂದರ್ಯಪ್ರಜ್ಞೆ ಗಮನಾರ್ಹ.

ಭಾವಿಸಮೀರ ಶ್ರೀ ವಾದಿರಾಜರು ತಮ್ಮ ರಚನೆಯಲ್ಲಿ–

**ಈ ಮುದ್ದು ಕೃಷ್ಣನ 'ಈಕ್ಷಣ'ದ ಸುಖವೇ ಸಾಕು ।**

ಚೆಲುವ ಚರಣ ದ್ವಂದ್ವ, ಜಂಘೆ ಜಾನೂರು ಕಟಿ, ವಳಿಪಂಕ್ತಿ, ಜಠರ, ವಕ್ಷ, ಕಂಬು ಕದರದಿ, ನಳಿ ತೋಳು, ಮುದ್ದುಮುಖ, ನಯನ, ನಾಸಿಕ, ಕರ್ಣ, ಸುಳಿಗುರುಳು ಮಸ್ತಕ, ನಳಿನನಾಭನ ಸೊಬಗು, ಕಿರುಗೆಜ್ಜೆ, ಕಡೆಪೆಂಡೆ, ಕಟಿಸೂತ್ರ, ವರಹಾರ ಪದಕ, ಶ್ರೀವತ್ಸಕೌಸ್ತುಭರತ್ನ, ಉರುಮುದ್ರೆ, ಕಂಕಣಾಂಗದ ಕುಂಡಲಪ್ರಭೆ, ಸಿರಿನಾಮ ಮಕುಟ ನಾಸಿಕದ ವರಮಣಿಯ ಉಡುಪಿಯ ಬಾಲಕೃಷ್ಣನ ವರ್ಣನೆಯಲ್ಲಿ ಭಗವಂತನನ್ನು ಈ ಬಾಲರೂಪದಲ್ಲಿ ನೋಡುವ ಸುಖಕ್ಕಿಂತ ಬೇರೆ ಸುಖವನ್ನು ಕಾಣಲಾರೆ ಎಂದು ಭಾವುಕರಾಗಿ ರಚಿಸಿರುತ್ತಾರೆ.

ಭಾವಿಸಮೀರ ಶ್ರೀ ವಾದಿರಾಜರು ಲಕ್ಷ್ಮೀಶೋಭಾನೆ ಹಾಡಿನಲ್ಲಿ ಶ್ರೀಮಹಾಲಕ್ಷ್ಮಿಯನ್ನು ವರ್ಣನೆ ಮಾಡುತ್ತ,

ಕಂಬುಕಂಠದ ಸುತ್ತ ಕಟ್ಟಿದ ಮಂಗಳಸೂತ್ರ, ಕೈಯಲ್ಲಿ ಕಮಲ, ಪೀತಾಂಬರಧಾರಿ, ವರ ಅಭಯವನ್ನೀಯುವ ಕೈಗಳಿಂದ ಕೂಡಿಕೊಂಡು, ಹೊಳೆವ ಚಿನ್ನದ ಒಡ್ಯಾಣ, ಕಿವಿಯ ಆಭರಣಗಳು, ನಲಿವ ಕಾಲಿನಗೆಜ್ಜೆ, ಮುದ್ದುಮೊಗದ ಚೆಲುವೆ, ರನ್ನದ ಮೊಲೆಗಟ್ಟು, ಚಿನ್ನದ ಆಭರಣಗಳು, ವಿವಿಧ ಹಾರಗಳು, ಮುತ್ತಿನ ಓಲೆ, ಕಸ್ತೂರಿತಿಲಕ, ಮುಕುಟ, ಕಾಂತಿಯ ಮೂಗುತಿ ಮಣಿ, ಮುತ್ತಿನ ಅಕ್ಷತೆ, ನವರತ್ನದ ಮುಕುಟ, ಮಲ್ಲಿಗೆ ಮಂದಾರ ಜಾಜಿ ಹೂಗಳ ಜಡೆಜಲ್ಲಿ, ಬಂಗಾರದ ಮೈವರ್ಣದ ಕೋಮಲೆ, ಬಾಡದ ಅರವಿಂದದ ಮಾಲೆ, ದೇವಾಂಗಪಟ್ಟೆಯ ಮೇಲು ಹೊದಿಕೆ, ಕಾಲುಂಗುರ ಹೀಗೆ ತಾಯಿಯನ್ನು ಬಹುವಿಧವಾಗಿ ವರ್ಣನೆ ಮಾಡಿರುವರು. ಸೌಂದರ್ಯ ಖಣಿಯ ಪ್ರತ್ಯಕ್ಷ ದರ್ಶನವನ್ನು ವರ್ಣಿಸುವುದರ ಮೂಲಕ ಲಕ್ಷ್ಮೀಶೋಭಾನೆ ಪಠಿಸುವ ಮೂಲಕ ಆ ಮಹಾತಾಯಿಯ ಅನುಗ್ರಹ ಭಕುತರಿಗೆ ಸಿದ್ಧಿಸಲಿ ಎಂಬ ಉತ್ಕಟೇಚ್ಛೆಯಿಂದ ಗುರುರಾಜರು ಈ ಕೃತಿಯನ್ನು ರಚಿಸಿರುತ್ತಾರೆ.

ದಾಸಸಾಹಿತ್ಯವು ಉಗಾಭೋಗ, ಕೀರ್ತನೆ, ಸುಳಾದಿ, ತ್ರಿಪದಿ, ದಂಡಕ, ಮುಂಡಿಗೆ ಇತ್ಯಾದಿ ಪ್ರಕಾರಗಳಿಂದ ಕೂಡಿ ಬಹಳ ವಿಸ್ತಾರವಾಗಿದೆ. ತಾತ್ವಿಕವಾದ, ಮೌಲ್ಯಯುತವಾದ, ನೈತಿಕವಾಗಿ ಇರತಕ್ಕಂತಹ ಸಂದೇಶಗಳನ್ನು ಜನಸಾಮಾನ್ಯರಿಗೋಸ್ಕರ ಹರಿದಾಸರು ಈ ರೀತಿಯ ವಿಧವಿಧ ಸಾಹಿತ್ಯ ಪ್ರಕಾರಗಳನ್ನು ಸಂಗೀತಾಧಾರಿತವಾಗಿ ಬೆಳೆಸಿದರು.

ದಾಸಸಾಹಿತ್ಯದ ವಿಶಿಷ್ಟತೆ ಏನೇ ಇದ್ದರೂ ಆರಂಭ ಹಾಗೂ ಅಂತ್ಯವಾಗುವುದು ಭಗವನ್ನಾಮ ಸ್ಮರಣೆಯಿಂದಲೇ.

ದಾಸರ ಸರ್ವಕೃತಿಗಳು ಏಕರೀತಿಯ ಹಿತೋಪದೇಶವೇ ಆಗಿದ್ದರೂ ರಚನಾ ಸಾಮರ್ಥ್ಯದಿಂದ ಮನುಕುಲದ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರುತ್ತಾ ಸಾಗುತ್ತದೆ. ಸರ್ವ ದಾಸರ ಕೃತಿಗಳ ಗುಣಗಳನ್ನು ವರ್ಗೀಕರಿಸಿದರೆ ಸಾಮಾನ್ಯವಾಗಿ ಐದು ವಿಭಾಗಗಳಾಗಿ ಮಾಡಬಹುದು: ವಸ್ತು, ಉದ್ದೇಶ, ಅಧಿಷ್ಠಾನ, ಹಿತೋಪದೇಶ, ಫಲಶ್ರುತಿ. ಈ ರೀತಿ ವಿಭಾಗಗಳಿಂದ ಕೂಡಿಕೊಂಡು ತನ್ನದೇ ಆದ ಗೂಢಾರ್ಥದ ವೈಶಿಷ್ಟ್ಯತೆಯಿಂದ ಹೊರಹೊಮ್ಮುತ್ತದೆ.

ಪ್ರಮುಖವಾಗಿ ದಾಸರ ಕೃತಿಗಳಲ್ಲಿ 'ವಸ್ತು'ವಿನ ಅನ್ವೇಷಣೆಯ ಸಾಧನೆಯಲ್ಲಿ ಅನುಭವಜನ್ಯ 'ಅಧಿಷ್ಠಾನ'ವು ಬೇರೆಬೇರೆ ಆಗುತ್ತದೆ. ಏಕೈಕ ಸದುದ್ದೇಶದ 'ಹಿತೋಪದೇಶ'ವು ಕೆಲವೆಡೆ ಸೌಮ್ಯ, ಕೆಲವೆಡೆ ಎಚ್ಚರಿಕೆಯ ಸಂದೇಶಗಳಾಗಿ, ಕೆಲವೆಡೆ ಜ್ಞಾನೋದ್ದೀಪನದ ನೇರ ಮಾತುಗಳಾಗಿ, ಕೆಲವೆಡೆ ಒಗಟಾಗಿಯೂ ಹರಿಯುತ್ತದೆ. ಜ್ಞಾನೇಚ್ಛುಯೋಗ್ಯ ಫಲಾನುಭವಿಗಳನ್ನು ಫಲಶ್ರುತಿಯತ್ತ ಸೇರಿಸುತ್ತವೆ.

ಯಾವುದೇ ದಾಸಕೃತಿಗಳಿರಲಿ 'ಮೂಲವಸ್ತು' ಸಾಮಾನ್ಯವಾಗಿ ಭಗವಂತನೇ ಆಗಿರುತ್ತಾನೆ. ಭಗವಂತನ ವಿವಿಧ ರೂಪಗಳು, ಆತನ ಸೌಂದರ್ಯ, ಲೀಲೆಗಳು, ಮಹಿಮೆಗಳು ಆತನ ದಾಸೋತ್ತಮರುಗಳು ಹೀಗೆ ಒಂದೊಂದೇ ವಿಷಯನಿಷ್ಠವಾಗಿಯೂ, ಸಾಮಾಜಿಕ ದೃಷ್ಟಿಕೋನದಿಂದ ಸಮಷ್ಟಿಯಾಗಿಯೂ ಕೂಡಾ ವಿಸ್ತೃತವಾಗುತ್ತಾ ಹೋಗುತ್ತದೆ. ದಾಸರು ಭಗವಂತನನ್ನು ಬೇರೆಬೇರೆ ಸಂಬಂಧದಿಂದ ಕಾಣುತ್ತಾ ಆತನನ್ನು ಪಾಡಿ ಸ್ತುತಿಸುತ್ತಾ ಅನಂತ ಆನಂದವನ್ನು ಅನುಭವಿಸುತ್ತಾ ಅರಳಿಸಿದ ಸಾಹಿತ್ಯ ಇಂದು ದಾಸಸಾಹಿತ್ಯವಾಗಿ ಪ್ರಚಲಿತದಲ್ಲಿದೆ.

ಸಾತ್ವಿಕ ಮನುಕುಲದ ಉದ್ಧಾರವೇ ಇಲ್ಲಿ ಸದುದ್ದೇಶ. ಇದು ಎಲ್ಲಾ ದಾಸಕೃತಿಗಳಲ್ಲೂ ಸಮಾನ. ತಾವನುಭವಿಸಿದ ಇಹಲೋಕದ ಬವಣೆಗಳೊಂದಿಗೆ ಹೋರಾಡಿ ಸನ್ಮಾರ್ಗ ಕಂಡು ಕೊಳ್ಳುವವರೆಗಿನ ಸುದೀರ್ಘ ಪಯಣದಲ್ಲಿ ಅನುಭವಿಸಿದ, ಕಣ್ಣಾರೆ ಕಂಡ ಸತ್ಯಾಸತ್ಯತೆಗಳನ್ನು ಎಚ್ಚರಿಕೆಯ ಅಂಶಗಳಿಂದಲೂ ಕೂಡಿಕೊಂಡು ಪಾಮರರಿಗಾಗಿ ಬಿಚ್ಚಿಟ್ಟು ನೀಡಿದ ಸನ್ಮಾರ್ಗ ಸನ್ನಡತೆಯ ವಿಚಾರಗಳು ಸದಾ ಅನುಕರಣೀಯ. ಇದೇ ಹಿತೋಪದೇಶದ ಸೆಲೆಯಲ್ಲಿ ದಾಸಸಾಹಿತ್ಯ ಅನಂತವಾಗಿ ವಿಸ್ತೃತವಾಗುತ್ತದೆ.

‘ಅನುಭವ’ ಇಲ್ಲಿ ಘನವಾಗುತ್ತದೆ. ಜೀವನ ಜಂಜಾಟದಿಂದ ಬೇಸತ್ತ ಮಾನವ, ತನ್ನ ಮಾನಸಿಕ ಸ್ಥೈರ್ಯಕ್ಕೆ ಹರಿದಾಸರ ಅಂಬೋಣದ ಹರಿಸ್ಮರಣೆಯ ವರ್ತುಲಕ್ಕೆ ಪ್ರವೇಶಿಸಿದಾಗ ಸಿಗುವ ಆತ್ಮಾನಂದದ ಹಿರಿಮೆಯಿಂದ ಪ್ರಭಾವಿತನಾಗುತ್ತಾ ಮಾನಸಿಕವಾಗಿ ದೃಢನಾಗಿ ‘ಈಸಬೇಕು ಇದ್ದು ಜಯಿಸಬೇಕು’ ಎನ್ನುವ ಮನಸ್ಥಿತಿಯಿಂದ ಸಂದರ್ಭವನ್ನು ಎದುರಿಸುತ್ತಾ ಲೌಕಿಕ ಸಾಧನೆಯೊಂದಿಗೆ ಅಲೌಕಿಕವಾಗಿಯೂ ಭಗವಂತನೆಡೆಗೆ ಸಾಗುತ್ತಾನೆ. ಇದೇ ದಾಸರ ಹಿತೋಪದೇಶದ ಮರ್ಮ. ಇದೇ ರೀತಿ ಸಾತ್ವಿಕಜೀವ ಸಾಧು ಸತ್ಸಂಗದಿಂದ ಪವಿತ್ರನಾಗಿ ಪರಮಪವಿತ್ರನ ಪಾದಗಳೆಡೆಗೆ ಸಾಗುತ್ತಾ ಯೋಗ್ಯತಾನುಸಾರವಾಗಿ ಶಾಶ್ವತ ಮೋಕ್ಷ ಪಡೆಯುತ್ತಾನೆ. ಇದೇ ದಾಸವರೇಣ್ಯರ ಮುಖ್ಯ ಉದ್ದೇಶ, ಸಮಷ್ಟಿಚಿಂತನೆಯ ಫಲಶ್ರುತಿ.

ನಮ್ಮ ಸರ್ವ ಚಲನವಲನಗಳಲ್ಲಿ, ಕಾರ್ಯಗಳಲ್ಲಿ ಕಾಯಾ ವಾಚಾ ಮನಸಾ ತ್ರಿಕರಣ–ಪೂರ್ವಕವಾಗಿ ಭಗವಂತನನ್ನು ಅನುಸಂಧಾನ ಮಾಡುತ್ತಾ ಲೌಕಿಕ ಜೀವನ ನಡೆಸಿದಾಗ ಅನಂತನೆಡೆಗೆ ಸಾಗುವ ಪ್ರಯತ್ನ ಸುಲಲಿತ, ಸಾರ್ಥಕ. ಇದೇ ಭಕ್ತಿಯ ಪರಾಕಾಷ್ಠೆಗೆ ಪೂರಕ, ಸಾಧಕ, ಭಗವಂತ ನೊಲುಮೆಯ ಪರಮಾನುಗ್ರಹಕ್ಕೆ ನಾಂದಿ. ಇದೇ ದಾಸವರೇಣ್ಯರ ವಸ್ತು, ಉದ್ದೇಶ, ಹಿತೋಪದೇಶ ಹಾಗೂ ಫಲಶ್ರುತಿಯ ಮಹಿಮೆ. ಈ ಚಿಂತನೆಯೇ ದಾಸಾಂತರ್ಗತ ಜಗತ್ತಿನ ಗರಿಮೆ.

ಪ್ರಗತಿಪಥದ ಸಮ್ಯಕ್ ರೀತಿಯನ್ನು ಉಪದೇಶಿಸಿದ ಹಲವಾರು ದಾಸರುಗಳ ಸಮಷ್ಠೀ ಚಿಂತನೆಯನ್ನು ಸಮಗ್ರವಾಗಿ ಈ ಲೇಖನದಲ್ಲಿ ಹಿಡಿದಿಡಲು ಅಸಾಧ್ಯವಾದರೂ, ಸೂಕ್ತವಾಗಿ ಸರಳ ರೀತಿಯಿಂದ ಸಜ್ಜನರಿಗೆ ತಲುಪಿಸುವ ಶಿಶು ಪ್ರಯತ್ನ.

ಹೊತ್ತು ಗೊತ್ತಿಲ್ಲದೇ ಹತ್ತುನೂರು ಸಮಸ್ತರು ಸದ್ವಿನಿಯೋಗಿಸಿದರು
ನಿತ್ಯ ಹರಿಪಾದದ ಸ್ಮರಣೆಯಲಿ ಸತ್ಯ ವಿರಕ್ತರಾಗಿ
ಅರೆಗಳಿಗೆ ಬಿಡದೆ ಸತ್ಯಾತ್ಮನ ಸಾನುಗ್ರಹದ ವಿಷಯಾನುರಕ್ತರಾಗಿ
ಅನವರತ ಭಜಿಸಿ, ಭುಂಜಿಸಿ, ಬಾಳಿ ಗಳಿಸಿದರು ಪರಿಮೋದದಿಂದ
ಶ್ರೀಭವಹರನ ಪಾದವ ಭಾವಿಸಮೀರ ಗುರುರಾಜರ ಪಾದಸಂಹನದಿಂದ
ನಾವೆಲ್ಲ ಸಾಗೋಣ ಭಕ್ತಾಗ್ರೇಸರರ ಅನುಗ್ರಹದ ದಾರಿಯಲ್ಲಿ ಬಹುದಿನ
ಅಗಣಿತ ಗುಣಧಾಮನ ಅನ್ವೇಷಣೆಯ ಸತ್ಯ ಪಥದಲ್ಲಿ ಅನುದಿನ
ಅಜರಾಮರ ವಂದಿತನ ನಿತ್ಯ ದಿವ್ಯ ನಾಮಸಂಕೀರ್ತನದ ಸನ್ನಿಧಾನಕೆ
ನಿತ್ಯ ಅನಂತ ಸುಖವೀವ ಸಚ್ಚಿದಾನಂದನ ಸಮ್ಮುಖದ ಸತ್ಯಧಾಮಕೆ

ಈ ನಿವೇದನೆಯೊಂದಿಗೆ ಈ ಲೇಖನಕ್ಕೆ ವಿರಾಮ.